

ಕೈತುಂಬಾ ಸಂಬಳ ಎಣಿಸುವ ಸಾಫ್ಟ್‌ವೇರ್ ಇಂಜಿನಿಯರ್ ಅವನು. ಆದರೂ ಗೋಪಾಲಯ್ಯನ ಅಂಗಡಿಗೆ ಕಚ್ಚಿಕೊಂಡಿದ್ದ ಅಂದರೆ ಅದಕ್ಕೆ ಕಾವೇರಿಯ ಸೆಳೆತ ಕೂಡಾ ಒಂದು ಕಾರಣ ಅನ್ನುವುದರಲ್ಲಿ ಸಂದೇಹ ಇಲ್ಲ. ಹಾಗೆಂದು ಕಾವೇರಿ ಅಂಗಡಿಯಲ್ಲಿ ಕೂತು ಅಪ್ಪನಿಗೆ ಸಹಾಯ ಮಾಡುತ್ತಿದ್ದಳು ಅಂತೇನಲ್ಲ. ಅಂಗಡಿಯ ಹಿಂಬದಿಯಲ್ಲೇ ಅವರ ಮನೆ. ಮೊದಲ ಬಾರಿ ಅವಳನ್ನು ನೋಡಿದ ಸಂದರ್ಭ ಇನ್ನೂ ಕೇಶವನ ನೆನಪಲ್ಲಿದೆ.

ಅವತ್ತು ಭಾನುವಾರ. ಅಂಗಡಿಗೆ ರಜಾ. ಊರಿಂದ ಬರುವಾಗ ಅಮ್ಮ ಕಟ್ಟಿ ಕೊಟ್ಟ ಬಿಸಿಬೇಳೆಬಾತ್ ಪುಡಿಯ ನೆನಪಾಗಿ ಅದನ್ನೇ ಮಾಡಿಕೊಂಡರೆ ಮೂರು ಹೊತ್ತಿಗೂ ನಡೆಯುತ್ತದೆ ಎಂದುಕೊಳ್ಳುತ್ತಾ ಘಮ್ಮನೆಯ ಬಿಸಿಬೇಳೆಬಾತ್ ನೆನಪಲ್ಲಿ ಕೇಶವ ಜೊಲ್ಲು ನುಂಗಿಕೊಂಡಿದ್ದ. ಬೇಕಾದ ಸಾಮಾನು ಸರಂಜಾಮುಗಳ ಪರಿಶೀಲನೆ ನಡೆಸಿದರೆ ಮುಖ್ಯವಾಗಿ ಬೇಕಾದ್ದೇ ಇಲ್ಲ. ತೊಗರೀಬೇಳೆ. ಜೊತೆಗೆ ನೀರುಳ್ಳಿ. ವಾರದ ಐದು ದಿನ ಕಂಪನಿಯ ಕ್ಯಾಂಟೀನಿನಲ್ಲೇ ತಿಂಡಿ, ಊಟ ನಡೆದು ಹೋಗುತ್ತಿತ್ತು. ಉಳಿದೆರಡು ದಿನಗಳಲ್ಲಿ ಸ್ವಯಂಪಾಕ ಇಳಿಸಿಕೊಳ್ಳುತ್ತಿದ್ದ ಕೇಶವ. ಹುಡಿಪುಡಿ, ಉಪ್ಪಿನಕಾಯಿ, ತುಪ್ಪ ಇತ್ಯಾದಿಗಳು ಊರಿಂದ ಸಮೃದ್ಧವಾಗಿ ಸರಬರಾಜಾಗುತ್ತಿದ್ದುವು. ಹೊಸಹೊಸ ಪಾಕಗಳ ಪ್ರಯೋಗ ನಡೆಸುವುದೆಂದರೆ ಕೇಶವನಿಗೂ ಹುಮ್ಮಸ್ಸು. ಅಂಗಡಿಗೆ ರಜಾ ಎಂದು ಗೊತ್ತಿದೆ ಅವನಿಗೆ. ಅಂಗಡಿಯಾತನ ಮನೆ ಅಲ್ಲೇ ಹಿಂಭಾಗದಲ್ಲಿರುವುದೂ ಗೊತ್ತಿದೆ. ಹೇಗೆ ಗೊತ್ತಿದೆ ಅಂದರೆ ಸಣ್ಣ ಅಂಗಡಿಯಲ್ಲಿ ಅಗತ್ಯಕ್ಕೆ ತಕ್ಕಷ್ಟು ವಸ್ತುಗಳನ್ನು ಇಟ್ಟುಕೊಂಡಿರುತ್ತಿದ್ದ ಮನುಷ್ಯ ಕೆಲವಷ್ಟನ್ನು ಮನೆಯಲ್ಲಿ ದಾಸ್ತಾನು ಮಾಡಿಕೊಂಡಿರುತ್ತಿದ್ದರು. ಬೇಕಾದ ಸಂದರ್ಭ ಬಂದಾಗ ತಕ್ಷಣ ಹಿಂದಿನ ಮನೆಗೆ ಹೋಗಿ ಗಿರಾಕಿಗಳಿಗೆ ಬೇಡಿಕೆಯ ವಸ್ತುಗಳನ್ನು ತಂದು ಒದಗಿಸುತ್ತಿದ್ದರು. ಇಂತಹ ಕೆಲವೊಂದು ಸಂದರ್ಭಗಳಿಗೆ ಸಾಕ್ಷಿಯಾಗಿದ್ದ ಕೇಶವ ಅಂಗಡಿಯ ಬಾಗಿಲು ಮುಚ್ಚಿದ್ದರೂ ತನಗೆ ಬೇಕಾದ ಸಾಮಾನು ಸಿಕ್ಕೀತು ಎನ್ನುವ ಅಂದಾಜಿನಲ್ಲಿ ಕೈಲೊಂದು ಚೀಲ ಹಿಡಿದು ಅಂಗಡಿಯ ಕಡೆ ಹೊರಟಿದ್ದ. ಯಾವತ್ತೂ ಹೋಗಿರದಿದ್ದ ಓಣಿಯಲ್ಲಿ ನಡೆದು ಆ ಮನೆ ಬಾಗಿಲಿಗೆ ಹೋಗಿದ್ದು ತನ್ನ ಭವಿಷ್ಯದ ದಿಕ್ಕನ್ನೇ ಬದಲಿಸುವ ಕ್ಷಣ ಆಗುತ್ತದೆಯೆಂದು ಕನಸುಮನಸಲ್ಲೂ ಅವನು ಅಂದುಕೊಂಡಿರಲಿಲ್ಲ. ಸೀದಾ ಹೋಗಿ ಮನೆ ಬಾಗಿಲು ತಟ್ಟಿದರೆ ಬಾಗಿಲು ತೆಗೆದಿದ್ದು ಈ ಇವಳು, ಕಾವೇರಿ. ತಲೆ ತುಂಬಾ ಹರಳೆಣ್ಣೆ ಒತ್ತಿಕೊಂಡು ತಲೆಸ್ನಾನಕ್ಕೆ ಸಜ್ಜಾಗಿದ್ದವಳು ನೀಳವೇಣಿಯನ್ನು ಸುತ್ತಿ ತಲೆಯ ಮೇಲೆ ಗಂಟಿಕ್ಕಿಕೊಂಡಿದ್ದಳು. ನೆತ್ತಿಯ ಸೀಮಾರೇಖೆ ದಾಟಿ ಹಣೆಯ ಮೇಲೆ ಅಲ್ಲಲ್ಲಿ ಇಳಿದಿತ್ತು ಎಣ್ಣೆ. ಕೈ ಬೋಳು. ಕಿವಿ ಬೋಳು. ಹಣೆ ಬೋಳು. ತೊಟ್ಟಿದ್ದೊಂದು ಬಣ್ಣ ಮಾಸಿದ ನೈಟಿ, ಆಚೀಚೆ ತೊಡೆಯ ಬಳಿ ಕೈ ವರೆಸಿ ವರೆಸಿ ಜಿಡ್ಡುಗಟ್ಟಿದ್ದು. ಹೊರಗೆ ನಿಂತಿದ್ದ ಯುವಕನನ್ನು ನೋಡಿ ಅವಳು ಸಹಜವಾಗಿ ಗಲಿಬಿಲಿಗೊಂಡಿದ್ದಳು. ಈ ಗಲಿಬಿಲಿಯಲ್ಲಿ ತನ್ನ ಇರಸರಿಕೆ ಕುರಿತಾದ ಮುಜುಗರವೂ ಸೇರಿಕೊಂಡಿರಬಹುದು. 'ಏನು?' ಎನ್ನುವಂತೆ ಅವಳು ನೋಡಿದ ಆ ಒಂದು ಪ್ರಶ್ನಾರ್ಥಕ ನೋಟಕ್ಕೆ ಆ ಕ್ಷಣ ವಶವರ್ತಿಯಾಗಿಬಿಟ್ಟಿದ್ದ ಕೇಶವ. ಯಾವ ಕೃತಕ ಸಾಧನಗಳ ಹಂಗಿಲ್ಲದ ಸಹಜ ಸೌಂದರ್ಯ. ಪ್ರಮಾಣಬದ್ಧ ನಿಲುವು. ಬಂದವನು ಮಾತಿಲ್ಲದೆ ತನ್ನನ್ನು ಅಳೆಯುವಂತೆ ನೋಡುತ್ತಾ ನಿಂತಿದ್ದನ್ನು ಕಂಡು ಹುಡುಗಿ ಹುಬ್ಬು ಗಂಟಿಕ್ಕಿದ್ದಳು. 'ಏನು? ಯಾರು ಬೇಕಾಗಿತ್ತು?' ಅಸಹನೆಯಿಂದ ಕೇಳಿದ್ದಳು.

'ಅಂಗಡಿಯೋರು ಇಲ್ವಾ?' ಎಚ್ಚೆತ್ತು ಕೇಳಿದ್ದ ಕೇಶವ.

'ಅಪ್ಪ ಸ್ನಾನ ಮಾಡ್ತಿದಾರೆ, ಬರ್ತಾರೆ…' ಅವಳು ಒಳಸರಿದು ಹೋಗಿದ್ದಳು. ಇವನು ಸುತ್ತ ನೋಡುತ್ತಾ ಹೊತ್ತು ಕಳೆದಿದ್ದ. ಮೆಟ್ಟಿಲಿನ ಆಚೀಚೆಯ ಕಿರುಜಾಗದಲ್ಲಿ ನಾಲ್ಕಾರು ಹೂಕುಂಡಗಳು. ದಿನವೂ ಪೂಜೆಗೊಳ್ಳುತ್ತಿದ್ದುದಕ್ಕೆ ಸಾಕ್ಷಿಯಾಗಿ ಅರಿಶಿನ, ಕುಂಕುಮಗಳಿಂದ ಸುಶೋಭಿತವಾದ ಒಂದು ತುಳಸಿ ಗಿಡ. ಕುಂಡದಲ್ಲಿ ಬೆಳೆದಿದ್ದರೂ ಸಮೃದ್ಧವಾಗಿ, ಸುಖವಾಗಿ ಬೆಳೆದು ನಿಂತ ಸೊಬಗು. ಆ ಹುಡುಗಿ ನೆನಪಾಗಿ ತುಟಿಯಂಚಿನಲ್ಲಿ ಕಿರುನಗೆ ಮೂಡಿತ್ತು. ತುಳಸಿಎಲೆಯೊಂದನ್ನು ಕಿತ್ತು ಬಾಯಿಗಿಟ್ಟುಕೊಂಡಿದ್ದ ಕೇಶವ. ಅಷ್ಟರಲ್ಲಿ ಈಚೆ ಬಂದಿದ್ದರು ಮನೆಯೊಡೆಯ.

'ಓ, ನೀವಾ, ಏನಾಗ್ಬೇಕಿತ್ತು?' ವಿಚಾರಿಸಿಕೊಂಡಿದ್ದರು. ಇವನು ಬಂದ ಕಾರಣ ತಿಳಿಸಿದ್ದ. ನಿರೀಕ್ಷೆಯಂತೆ ಅವರು ಹಿಂಬಾಗಿಲಿನಿಂದ ಅಂಗಡಿ ಹೊಕ್ಕು, ಇವನ ಬೇಡಿಕೆ ಪೂರೈಸಿದರು. 'ತೊಂದರೆ ಆಯ್ತೇನೋ ನಿಮಗೆ?' ಕೇಶವ ಸೌಜನ್ಯದ ಮಾತಾಡಿದ್ದ.

'ಛೇಛೇ, ಅಂಗಡೀಲಿ ವ್ಯಾಪಾರ ಆಗೋದೇ ಕಮ್ಮಿ, ಗಿರಾಕಿ ಬಂದ್ರೆ ತೊಂದರೆಯಾಗುತ್ತಾ? ಅರ್ಜೆಂಟಿಗೆ ಏನಾದ್ರೂ ಬೇಕಾದ್ರೆ ಬನ್ನಿ, ಪರ್ವಾಗಿಲ್ಲ. ನಾನು ಮನೇಲೇ ಇರ್ತೀನಿ.'.

ಭಾನುವಾರ ಬಂತು ಅಂದರೆ ಯಾವುದೋ ಸಾಮಾನಿನ ನೆಪ ಇಟ್ಟುಕೊಂಡು ಆ ಮನೆಗೆ ಹೋಗಬೇಕೆಂದು ಕೇಶವನ ಪ್ರಾಯಕ್ಕೆ ಹಲವು ಸಲ ಅನ್ನಿಸಿದ್ದಿತ್ತು. ಅದು ಸನ್ನಡತೆಯಲ್ಲ ಎಂದು ತನಗೆ ತಾನೇ ಸಂಯಮ ತಂದುಕೊಳ್ಳುತ್ತಿದ್ದ ಕೇಶವ. ಅವನೇನು ಹುಡುಗಿಯರನ್ನು ಕಾಣದವನಲ್ಲ. ಒಡನಾಡದವನಲ್ಲ. ಆವಶ್ಯಕತೆಗಿಂತ ಹೆಚ್ಚು ಯಾರೊಂದಿಗೂ ಸಲಿಗೆ ಬೆಳೆಸಿಕೊಳ್ಳದ ಕೇಶವನಿಗೆ ಈ ಹುಡುಗಿ ಅದೇನು ಮೋಡಿ ಮಾಡಿದಳೋ ಅವನಿಗೆ ಗೊತ್ತಿಲ್ಲ. ಮತ್ತೊಮ್ಮೆ ಅವಳನ್ನು ನೋಡಬೇಕೆಂದು, ಮಾತಾಡಿಸಬೇಕೆಂದು ಮನಸ್ಸು ತುಡಿಯತೊಡಗಿತ್ತು. ಒಮ್ಮೆ ಈ ಸೆಳೆತ ಬಲವಾಗಿ ಕೇಶವ ಯಾವುದೋ ಸಾಮಾನಿನ ಹೆಳೆ ಮಾಡಿಕೊಂಡು ಆ ಮನೆಯ ಬಾಗಿಲು ತಟ್ಟಿದ್ದ, ಒಂದು ಭಾನುವಾರ. ಮನೆ ಯಜಮಾನರೇ ಬಾಗಿಲು ತೆಗೆದಿದ್ದು ನೋಡಿ ಕೇಶವನಿಗೆ ಹೇಳತೀರದ ನಿರಾಶೆ. ಅವನ ಮುಖ